ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 1ನೇ ಜುಲೈ 1884.

ಬೆಂಗಳೂರಲ್ಲಿರತಕ್ಕ ಮೈಸೂರು ಗವರ್ನಮೆಂಟ್ ಸೇವಿಂಗಸ್ ಬ್ಯಾಂಕಿನ ಡಿಪಾಜಿಟ್‌ದಾರ್ರಿಗೆ ಕೇಳಿ, ಕೊಳ್ಳುವದೇನಂದರೆ, 1884ನೇ ಇಸವಿ ಮಾರ್ಚಿ 31ನೇ ಮರ್ತುಂ ವರಿಗಿನ ಬಡ್ಡಿಯನ್ನ ಫೈಸಲ್ಮಾಡುವ ಬಗ್ಯಾಗಿ ಅವರವರ ಪ್ಯಾಸ್ ಬುಕ್ಕುಗಳನ್ನು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಹಾಜರ್ಮಾಡತಕ್ಕದ್ದು.

ಎ. ರಂಗಸ್ವಾಮಯ್ಯಂಗಾರ್,
ಛಾರ್ ಟ್ರೆಜರಿ ಆಫೀಸರ್.

ಬೆಂಗಳೂರು ಸಬ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ—

1884ನೇ ಇಸವಿ ಅರ್ಜೀ ನಂಬರು 116.

ಬೆಂಗಳೂರು ರಾಮಂಣನ ಪೇಟೆಲಿರುವ ಮರುಳು ಸಿದ್ದಯ್ಯ ಬೆಂಗಳೂರು ಸ್ಥಳದ ದೊಡ್ಡ ಹೊನ್ನಯ್ಯ ವೆರಫ್ ರುದ್ರಯ್ಯ

ಅರ್ಜೀದಾರ ಯಿದರಿ ಮೈನರಾದ ಬೆಂಗಳೂರು ರಾಮಂಣನ ಪೇಟೆ ಸ್ಥಳದ ಅಕ್ಕಿ ಹೊನ್ನಮ್ಮನ ಆಸ್ತಿ ವಿಷಯದಲ್ಲಿ—

ಸದರೀ ಮೈನರಾದ ಅಕ್ಕಿ ಹೊನ್ನಮ್ಮನಿಗೆ ಮಾವನಾಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಸ್ಥಳದ ಮರುಳು ಸಿದ್ದಯ್ಯನು, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾನೆ.

ಸದರೀ ಅರ್ಜೀ ಹಿಯರಿಂಗ್ ಬಗ್ಯೆ 1884ನೇ ಇಸವಿ ಆಗಸ್ಟು ತಾರೀಖು 21ರಲ್ಲು ವೊಕರರು ಮಾಡಿರುವದಾಗಿ ಇದರಿಂದ ನೋಟೀಸು ಕೊಡಲಾಗಿದೆ.

1884ನೇ ಇಸವಿ ಅರ್ಜೀ ನಂಬರ್ 122.

ಮೃತಪಟ್ಟ ಅಂಗಡೀ ನಂಜಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ತಾಲ್ಲೂಕು ಯಶವಂತಪುರದ ಹೋಬಳಿ ಬಜೆಗೌಡನ ಕೊಡಗೇಹಳ್ಳಿ ಮುನಿಶಾಮಪ್ಪ, ಮೃತಪಟ್ಟ ಸದರೀ ಅಂಗಡೀ ನಂಜಪ್ಪನವರಿಗೆ ಅಳಿಯನಾಗಬೇಕೆಂಬ ಹಕ್ಕುದಾರೀ ಮೇಲೆ ಕೊಡಗೇಹಳ್ಳಿ ಸ್ಥಳದ ಮುನಿಶಾಮಪ್ಪನವರು ಕೊಡಗೇಹಳ್ಳಿ ವೆಂಸಸ್ಥರಾಗಿ ಮೃತಪಟ್ಟ ಸದರೀ ನಂಜಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಐಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುನಿಶಾಮಪ್ಪನವರ ಅರ್ಜಿಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿವರ್ಕೆ ಮಾಡಲ್ಪಡುತ್ತೆ... ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ದಾ॥ 1884ನೇ ಇಸವಿ ಜುಲೈ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟು ವೊಹರ್‌ನಿಂ ಮತ್ತು ನನ್ಮುದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರೀದೇಣೀದಾರ ಚಿಕ್ಕಬಳ್ಳಾಪುರ ತಾ॥ ದಾಸರಹಳ್ಳಿಯಲ್ಲಿ ಇರುವ ವಡ್ಡರ ಗುರುವನ ಮಗ ಮುನಿಗನ ವಿಷಯದಲ್ಲಿ.

ಸ್ರ 1884ನೇ ಇಸವಿ ದಿವಾಳಿ ಕೇಸ್ ನಂಬರ್ 22ರಲ್ಲಿ.

ಹುಕ್ಕುಂ.

ವೆಂಕಟ್ಟಂಡ ವಡ್ಡರ ಗುರುವನ ಮಗ ಮುನಿಗನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್‌ರಾದ ಸಿ. ಕೈಸ್ ಸಾಹೆಬರವರ ರೂಬರೂ ಅರ್ಜೀದಾರನಾದ ವಡ್ಡರ ಗುರುವನ ಮಗ ಮುನಿಗನ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣದಾರು) ತಮಗೆ ಈ ದರ್ಖಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, 1ನೇ ರಾಯಪ್ಪನಹಳ್ಳಿ ಮಲ್ಲಪ್ಪ, 2ನೇ ಹನುಮಂತ ಗೌಡ, 3ನೇ ತಮ್ಮಣ್ಣ, 4ನೇ ವೆಂಕಟಪ್ಪ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮುನಿಗನು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಅರ್ಜೀದಾರನ ಸಾಲತೋರಿಸತಕ್ಕ ಷೆಡ್ಯೂಲ್.

ನಂಬರು.	ಲೇಣೇದಾರು) ಅಥವಾ ದಾವಾದಾರ) ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೀ ಕೊಂಟುದದ್ದು	ದೇಣಿಯ ಸ್ವಭಾವ ಮತ್ತು ಅದರ ಪ್ರತಿ ಫಲ ಹುತ್ತು ಗಿರ್ವಿಯೇನಾದರು ಇದ್ದರೆ.	ಷರಾ.
1	ಚಿಕ್ಕಬಳ್ಳಾಪುರ ತಾ॥ ರಾಯಪ್ಪನಹಳ್ಳಿ ಮಲ್ಲಪ್ಪನಿಗೆ.	125-5-0	1884.	ಚಿಕ್ಕಬಳ್ಳಾಪುರ ಸ॥ ಡಿ॥ ಮುನಸಿಫ್ ಕೋರ್ಟು 1884ನೇ ಇಸವಿ ಜಾರಿ 195.	
2	ದಿಬ್ಬೂರು ಪಟೇಲ್ ಹನುಮಂತಗೌಡ	44	1882	1882ನೇ ಇಸವಿ ಮಾರ್ಚಿ ಕೈಸಾಲದ ಬಾಬತು.	
3	ದಿಬ್ಬೂರಲ್ಲಿ ಗೆಜ್ಜಿಗನ ತಮ್ಮಣ್ಣ	12	1883	1883ನೇ ಇಸವಿ ಫಿಬ್ರವರಿ ತಿಂಗಳು ಕೈಸಾಲದ ಬಾಬತು.	
4	ಡಿಟೋ ಸ್ಥಳದ ಕಂದೂರು ವೆಂಕಟಪ್ಪ	24	1879	18879ನೇ ಇಸವಿ ಭೋಗ್ಯಪತ್ರದ ಬಾಬತು.	

ಸ್ಯ 1884ನೇ ಇಸವಿ ಜುಲೈ 24ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ಸಮ್ಮದಸ್ತಖತ್‌ನೀಲೇ ಕೊಡಲ್ಪಟ್ಟಿತು.

ದಿವಾಳೀಯಾದ ಡಿ॥ ದೇಣೇದಾರ ಬೆಂಗಳೂರು ಪ್ರಿಂಟಿಂಗ್ ಆಫೀಸ್ ಕಂಪೂಜಿಟರ್ ರಾಮಸ್ವಾಮಯ್ಯನ ವಿಷಯದಲ್ಲಿ.

1884ನೇ ಇಸವಿ ದಿವಾಳೀ ಕೇಸ್ ನಂಬರ್ 47ರಲ್ಲಿ.

ಹುಕ್ಕುಂ.

ಮೇಲ್ಕಂಡ ರಾಮಸ್ವಾಮಯ್ಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್ರೀ ಸಿ. ಕೈಸ್ ಸಾಹೆಬರವರ ರೂಬರೂ ಅರ್ಜೀದಾರನಾದ ರಾಮಸ್ವಾಮಯ್ಯನ ಪರವಾಗಿ ಮೆ॥ ನರಸಿಹ್ಮಯ್ಯಂಗಾರ್ ಪ್ಲೀಡರನ್ನು ಮತ್ತು ಸದರೀಯವನೆ ಲೇಣೇದಾರ್ರಾದ 1ನೇ ಮುನಿಶಾಮಪ್ಪ, 2ನೇ ಪುತ್ಯಾಲನಾಯಡು, 3ನೇ ಬೆಂಗಳೂರು ಹಿಂದೂಬ್ಯಾಂಕ್, 4ನೇ ಬೆಂಗಳೂರು ರಾಜಧಾನಿ ಬ್ಯಾಂಕ್ ನವರಿಗೂ ದರ್ಖಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು) ತಮಗೆ ಈ ದರ್ಖಾಫ್ತ್ರೀ-ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ, 1ನೇ ಮುನಿಶಾಮಪ್ಪ, 4ನೇ ಬೆಂಗಳೂರು ರಾಜಧಾನಿ ಬ್ಯಾಂಕ್.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ರಾಮಸ್ವಾಮಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೇಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸೂಲದ ಪಟ್ಟಿ.

ನಂಬರ.	ಲೇಣದೇದಾರು) ಅಥವಾ ದಾವಾದಾರ) ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿ ಕೊಂಡದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರು ಇದ್ದರೆ.	ಷರಾ.
1	ಬೆಂಗಳೂರು ಯಲಹಂಕದ ಬಾಗಲ್ ಬಳಿ ಇರುವ ಪಟ್ಟಣಿ ಮುನಿಶಾಮಪ್ಪಗೆ ಅರ್ಜಿದಾರ ಇವನ ತಂದೆ ಮತ್ತು ಇವನ ತಮ್ಮ ಸಹಾ ಮಾಡಿದ್ದು.	ರೂ. ಆ. ಪೈ 22-15 8	1884	ಬೆಂಗಳೂರು ಅಡಿಷನಲ್ ಮುನಸಿಫ್ ಕೋರ್ಟು 1884ನೇ ಇಸವಿ ಸ್ಮಾಲ್ ಕಾಜ್ 361ನೇ ಡಿಕ್ರಿ ಬಾಬತು	
2	ಮೆಜೋರ್ ವಾರಿ ಬೆಂಗಳೂರು ಕಲಾಸಿಪಾಳ್ಯದಲ್ಲಿ ಇರುವ ಮುತ್ಯಾಲನಾಯಡರಿಗೆ ಅರ್ಜಿದಾರ ಮತ್ತು ಈತನ ತಂದೆ ಸಹಾ ಮಾಡಿದ್ದು.	93-9-0	1877	1877ನೇ ಇಸವಿ ಲೇಟ್ ಸ್ಮಾಲ್‌ಕಾಜ್ ಕೋರ್ಟು 5454ನೇ ನಂ. ಡಿಕ್ರಿ ಬಾಬತು	
3	ಬೆಂಗಳೂರು ಹಿಂದೂ ಬ್ಯಾಂಕಿಗೆ ಅರ್ಜಿದಾರ ಮತ್ತು ಈತನ ತಂದೆ ಮಾಡಿದ್ದು.	76-0-0	1875	ಲೇಟ್ ಸ್ಮಾಲ್‌ಕಾಜ್ ಕೋರ್ಟು 1875ನೇ ಇಸವಿ 6552ನೇ ನಂಬರ್ ಡಿಕ್ರಿ ಬಾಬತು	
4	ಬೆಂಗಳೂರು ರಾಜಧಾನಿ ಬ್ಯಾಂಕಿಗೆ ಅರ್ಜಿದಾರ ಮತ್ತು ಇವನ ತಂದೆ ಮತ್ತು ಇವನ ತಮ್ಮ ಮತ್ತು ಇವನ ಭೂವಮ್ಯೆದನಿಂದ ಮಾಡಿದ್ದು.	162 0 0	1877	ಲೇಟ್ ಸ್ಮಾಲ್‌ಕಾಜ್ ಕೋರ್ಟು 1877ನೇ ಇಸವಿ 2693ನೇ ನಂಬರ್ ಡಿಕ್ರಿ ಬಾಬತು	

1884ನೇ ಇಸವಿ ಜುಲೈ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ಯೇಸ್,
ಸಬ ಜಡ್ಜ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 230.

ಮೃತಪಟ್ಟ ನಂಜಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗರಳಪುರಯ್ಯ, ಮೃತಪಟ್ಟ ಸದರೀ ನಂಜಪ್ಪನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ತಾಲ್ಲೂಕು ಕಡಬೂರು ಸ್ಥಳದ ಸದರೀ ಗರಳಪುರಯ್ಯನು, ಸದರೀ ವಾಸಸ್ಥರಾಗಿ ಮೃತಪಟ್ಟ ನಂಜಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 75 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ನೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗರಳಪುರಯ್ಯನ ಅರ್ಜಿಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 233.

ಮೃತಪಟ್ಟ ಸೈದಬುರ್ಜ ಸಾಬಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸೈದ್ ಅಹಮ್ಮದ್‌ಸಾಬಿ, ಮೃತಪಟ್ಟ ಸದರೀ ಸೈದ್ ಬುರ್ಜ್‌ಸಾಬಿಗೆ ಅಂಣನಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಯಡತೊರೆ ತಾಲ್ಲೂಕು ನಾಲಿಗ್ರಾಮ ಸ್ಥಳದ ಸದರೀ ಸೈದ್ ಅಹಮ್ಮದ್ ಸಾಬಿಯು, ಸದರೀ ವಾಸಸ್ಥನಾಗಿ ಮೃತಪಟ್ಟ ಸೈದ್ ಬುರ್ಜ್‌ಸಾಬಿ